


ಗಂಡ ಪೇಪರ್ ಓದ್ತಾ ಇದ್ದ. ಹೆಂಡತಿ ಕೇಳಿದಳು, 'ರೀ ಸ್ವಲ್ಪ ಪೇಪರ್ ಕೊಡಿ'

'ಏನಕ್ಕೆ ಪೇಪರ್ ನಿನಗೆ, ಟೆಕ್ನೋಲೊಜಿ ಎಷ್ಟೊಂದು ಮುಂದುವರೆದಿದೆ. ತಗೋ ನನ್ನ ಹೊಸಾ ಟ್ಯಾಬ್, ಉಪಯೋಗಿಸು' ಅಂದ.

ಹೆಂಡತಿ ಟ್ಯಾಬ್ ತಗೊಂಡು ಒಂದು ಜಿರಲೆ ಹೊಡೆದ್ಲು! ಗಂಡ ಮೂರ್ಛೆ ಹೋದ.

★★★

ಮಹಿಳೆ: ನಾನು ನಾಳೆನೇ ನನ್ನ ಗಂಡನ ಜೊತೆಗೆ ಮರು ಮದುವೆ ಆಗಬೇಕು.

ಲಾಯರ್: ಡೈವೋರ್ಸ್ ತಗೊಂಡು ಒಂದು ತಿಂಗಳಾಗಿದೆ ಅಷ್ಟೇ? ಮತ್ತೆ ಮರು ಮದುವೆ ಯಾಕಮ್ಮ..

ಮಹಿಳೆ: ಈಗ ಒಂದು ತಿಂಗಳಿಂದ ನನ್ನ ಗಂಡ ತುಂಬಾ ಸಂತೋಷದಿಂದ ಇದ್ದ ಹಾಗಿದ್ದಾನೆ ಅದಕ್ಕೆ...

★★★

ಶೀಲಾ ತನ್ನ ಗಂಡನಿಗೆ ಹೇಳಿದ್ಲು: ರೀ ಪಕ್ಕದ ಮನೆಯ ಮೂರ್ತಿಯವರು ತಮ್ಮ ಮೂರನೆಯ ಹೆಂಡತಿಯ ತಿಥಿಗೆ ಹೇಳಿಹೋಗಿದ್ದಾರೆ...

'ನಾ ಹೋಗೊಲ್ಲಾ ಕಣೆ'

'ಯಾಕ್ರೀ...?'

'ಪ್ರತಿಸಾರಿ ನಾನೇ ಹೋಗ್ತೀನಿ, ಅವರನ್ನು ಕರೆಯಲಿಕ್ಕಾಗುತ್ತಿಲ್ಲವಲ್ಲ.. ಅದಕ್ಕೆ'

★★★

ಬಸ್ಸು ಕರುಣಾಪುರದಿಂದ ಮೇಗ್ರೊಳ್ಳಿಗೆ ಹೊರಟಿತ್ತು. ಕಾಮತರ ಹೋಟೆಲಿನ ಬಳಿ ಮೂರು ಚಿಕ್ಕ ಹೆಣ್ಮಕ್ಕಳ ಜೊತೆಗೆ ಬಸ್ಸು ಹತ್ತಿದ ಶೀಲಾಳ ಬಳಿ ಕಂಡಕ್ಟರ್: ಅಕ್ಕಾ ಹೆಣ್ಣಮಕ್ಕಳಿಗೆ ವಯಸ್ಸು ಎಷ್ಟು?

ಶೀಲಾ: ಸಣ್ಣವಳಿಗೆ ಎರಡ್ ವರ್ಷ, ಮಧ್ಯದವಳಿಗೆ ಎರಡೂವರೆ ವರ್ಷ, ದೊಡ್ಡೋಳಿಗೆ ಮೂರು ವರ್ಷ.

ಕಂಡಕ್ಟರ್: ಅಕ್ಕ ವಯಸ್ಸೇನೋ ಕಡ್ಮಿ ಮಾಡಿ ಹೇಳಿ ಆದ್ರ... ಒಂದ್ ಮಗುವಿಗೂ ಮತ್ತೊಂದಕ್ಕೂ ಗ್ಯಾಪ್ ಒಂಬತ್ತು ತಿಂಗಳ ಆದ್ರೂ ಇರ್ಲಿ.

★★★

ಶೀಲಾ: ನಾನು ಯಾವುದಾದರೂ ಕೆಲಸ ಶುರು ಮಾಡಿದ್ರೆ ಅದ್ರಲ್ಲೇ ಮುಳುಗಿ ಹೋಗ್ತೀನಿ.

ಗುಂಡ: ಹಾಗಾದ್ರೆ ನೀನ್ಯಾಕೆ ಬಾವಿ ತೋಡಬಾರದು?

★★★

ಗುಂಡ ತನ್ನ ಹೆಂಡತಿಗೆ ಹೇಳಿದ ನಾನು ಈಗ ಅತ್ಯಂತ ಕರುಣಾಜನಕ ಅಂತ್ಯವಿರುವ ಪುಸ್ತಕ ನೋಡಿದೆ...? ಎಂದ.

ಹೆಂಡತಿ: ರೀ ಅದು ಯಾವ ಪುಸ್ತಕ...

ಗುಂಡ: ನನ್ನ ಬ್ಯಾಂಕಿನ ಪಾಸ್ ಪುಸ್ತಕ.

★★★

ಟೀಚರ್ ಸಾಂಪ್ರನನ್ನು ಕೇಳಿದ್ರು 'ಯಾಕೋ ಸ್ಕೂಲ್‌ಗೆ ಲೇಟು...'

'ಮನೇಲಿ ಅಪ್ಪ-ಅಮ್ಮನ ಜಗಳ..'

'ಅದ್ಕೆ ನೀ ಯಾಕೋ ಲೇಟು...?'

'ನನ್ನ ಒಂದು ಷೂ ಅಪ್ಪನ ಹತ್ರ, ಇನ್ನೊಂದು ಅಮ್ಮನ ಹತ್ತಿರ ಇತ್ತು.'

★★★

ಅವರಿಬ್ಬರಿಗೆ ಮದುವೆಯಾಗಿ ಎರಡು ದಶಕ ಕಳೆದಿತ್ತು. ಹೆಂಡತಿಯ ಹುಟ್ಟುಹಬ್ಬ ಬಂತು. ಆಕೆ ಗಂಡನನ್ನು ಪ್ರೀತಿಯಿಂದ ಕೇಳಿದಳು:

'ರೀ ಮದುವೆಯಾದ ಹೊತರಲ್ಲಿ ನೀವು ಹುಟ್ಟುಹಬ್ಬಕ್ಕೆಂದು ನನಗೆ ಕಬ್ಬಿಣದ ಮಂಚ ಕೊಡಿಸಿದ್ರಲ್ಲಾ ನೆನಪಿದೆಯಾ...?'

ಗಂಡ ಹೇಳಿದ 'ಹುಂ ನೆನಪಿದೆ ಕಣೆ'

ಹೆಂಡತಿ ಮತ್ತೆ ಕೇಳಿದ್ಲು 'ಈಗೇನು ಕೊಡ್ತೀರಾ ರೀ..'

ಅದಕ್ಕವನು ಸೈಲೆಂಟಾಗಿ ಹೇಳಿದ 'ಕಬ್ಬಿಣದ ಮಂಚಕ್ಕೆ ಕರೆಂಟು ಕೊಡ್ತೀನಿ ಚಿನ್ನಾ.'

★★★

ಆಷಾಢಕ್ಕೆ ಗುಂಡನ ಹೆಂಡತಿ ತವರಿಗೆ ಹೋಗಿದ್ಲು. ಗುಂಡನಿಗೆ ಸಾಂಬಾರು ಮಾಡುವ ಬಗ್ಗೆ ಫೋನಿನಲ್ಲಿ ಸಲಹೆಗಳನ್ನು ಕೊಡುತ್ತಿದ್ದಳು. ಎಲ್ಲಾ ಮುಗಿದ ಮೇಲೆ ಗುಂಡ ಮತ್ತೆ ಫೋನ್ ಮಾಡಿ ಕೇಳಿದ:

'ಸಾಂಬಾರಿಗೆ ತಲೆಕೂದಲು ಹಾಕುವುದು ಯಾವಾಗ...?'

(ಸಂಗ್ರಹ) ತೈರೊಳ್ಳಿ ಮಂಜುನಾಥ ಉಡುಪ


ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ

ಶ್ರೀ ಸಾಯಿಬಾಬ ಉಪಾಸಕರು
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ
ಕೇವಲ 5 ದಿನದಲ್ಲಿ
100% ಪರಿಹಾರ ಶತಸಿದ್ಧ
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು. 9620444460